## ನಿಮ್ಮೊಡನೆ

# ಬಾಲ್ಯ ವಿವಾಹ ಏಕೆ ನಿಂತಿಲ್ಲ?

ಪ್ರಚಾರಾಂದೋಲನ ಮತ್ತು ಘೋಷಣೆಗಳು ಜನರ ಗಮನ ಸೆಳೆಯುತ್ತವೆ ಎನ್ನುವುದು ನಿಜ. ಆದರೆ ಬಾಲ್ಯವಿವಾಹದಂತಹ ಪಿಡುಗು ಕೇವಲ ಪ್ರಚಾರ ಮತ್ತು ಘೋಷಣೆಗಳಿಂದ ನಿವಾರಣೆಯಾಗುವುದಿಲ್ಲ.

‘ಎಳೆಯ ವಯಸ್ಸಿನಲ್ಲಿ ಮಕ್ಕಳಿಗೆ ಮದುವೆ ಮಾಡಬಾರದು; ದೈಹಿಕವಾಗಿ ಮತ್ತು ಮಾನಸಿಕವಾಗಿ ಅವರು ಪ್ರಬುದ್ಧರಾದ ಬಳಿಕವಷ್ಟೇ ಮದುವೆ ಮಾಡಬೇಕು’ ಎಂದು ಯಾರಾದರೂ ನಿಮಗೆ ಬುದ್ಧಿ ಹೇಳಿದರೆ ನಗು ಬರಬಹುದು– ಅಷ್ಟೂ ಗೊತ್ತಿಲ್ವೆ..? ಎನ್ನೋದು ಈ ನಗುವಿನ ಅರ್ಥ. ಎಳೆಯ ಮಕ್ಕಳಿಗೂ ಅರ್ಥವಾಗುವ ಈ ಸಂಗತಿ ಇನ್ನೂ ನಮ್ಮ ದೇಶದಲ್ಲಿ ಎಷ್ಟೋ ದೊಡ್ಡವರಿಗೆ ಅರ್ಥ ಆಗುತ್ತಿಲ್ಲ ಎನ್ನುವುದು ವಿಷಾದದ ಸಂಗತಿ. 2011ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ, ಭಾರತದ ಮಹಿಳೆಯಲ್ಲಿ ಶೇಕಡಾ 30ರಷ್ಟು ಹೆಣ್ಣುಮಕ್ಕಳು 18 ವರ್ಷ ತಲುಪುವುದಕ್ಕಿಂತ ಮುಂಚೆಯೇ ಮದುವೆಯಾಗಿದ್ದಾರೆ. ಭಾರತದಲ್ಲಿ ಕಾನೂನುಬದ್ಧವಾಗಿ ಮದುವೆಯಾಗಲು ಹೆಣ್ಣಿಗೆ 18 ವರ್ಷ ಮತ್ತು ಗಂಡಿಗೆ 21 ವರ್ಷ ತುಂಬಿರಬೇಕು. ಆದರೆ ವಯೋಮಿತಿಯ ಈ ನಿರ್ಬಂಧದ ಹಿಂದಿನ ಸಾಮಾಜಿಕ ಕಾರಣಗಳನ್ನು ನಮ್ಮಲ್ಲಿ ಪದೇ ಪದೇ ನಿರ್ಲಕ್ಷಿಸಲಾಗುತ್ತಿದೆ. ಸುಮಾರು 80 ಲಕ್ಷದಷ್ಟು ಹೆಣ್ಣುಮಕ್ಕಳು ಇನ್ನೂ ಹತ್ತರ ಎಳವೆಯಲ್ಲೇ ಮದುವೆಯಾಗಿದ್ದಾರೆ ಎನ್ನುವ ಅಂಕಿ ಅಂಶವನ್ನೂ ಜನಗಣತಿ ಬಹಿರಂಗಪಡಿಸಿದೆ.

ದೇಶದಲ್ಲಿ ಹೀಗೆ ವರದಿಯಾಗಿರುವ ಬಾಲ್ಯವಿವಾಹದಲ್ಲಿ ಶೇಕಡಾ 23.2ರಷ್ಟು ಪಾಲು ಕರ್ನಾಟಕದ್ದು! ಅದರಲ್ಲೂ ರಾಜ್ಯದ ಉತ್ತರ ಭಾಗದಲ್ಲಿ ಬಾಲ್ಯವಿವಾಹಗಳು ನಡೆಯುವುದು ಹೆಚ್ಚು. ಯಾದಗಿರಿ, ಧಾರವಾಡ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಿಂದ ಬಾಲ್ಯವಿವಾಹದ ಅತ್ಯಧಿಕ ಪ್ರಕರಣಗಳು ವರದಿಯಾಗಿವೆ. ಬಾಲ್ಯದಲ್ಲಿ ಓದಬೇಕಾದ, ಆಡಬೇಕಾದ ಮತ್ತು ಸ್ವಚ್ಛಂದ ಬದುಕು ನಡೆಸಬೇಕಾದ ಎಳೆಯರನ್ನು ಮದುವೆಯ ಬಂಧನಕ್ಕೆ ಕಟ್ಟಿಹಾಕುವುದು ನಿಜಕ್ಕೂ ಅಕ್ಷಮ್ಯ ಅಪರಾಧ. ಇನ್ನೂ ದೇಹ ಗರ್ಭ ಕಟ್ಟಿಕೊಳ್ಳಲು ಸಿದ್ಧವಾಗಿಲ್ಲದ ಸ್ಥಿತಿಯಲ್ಲಿ ಎಳೆಯ ಹೆಣ್ಣುಮಕ್ಕಳು ಮದುವೆಯಾಗಿ ಮಕ್ಕಳಿಗೆ ಜನ್ಮ ನೀಡುವುದು ಉಂಟು ಮಾಡುವ ಮನೋ ದೈಹಿಕ ವೇದನೆಗಳು ಅಪಾರ. ಒಂದೆಡೆ ಪೋಷಕಾಂಶಗಳ ಕೊರತೆಯಿಂದ ಅನಾರೋಗ್ಯಕ್ಕೆ ಒಳಗಾಗುವುದು, ಇನ್ನೊಂದೆಡೆ ಆಡುವ– ಕಲಿಯುವ ವಯಸ್ಸಿನಲ್ಲಿ ಮಕ್ಕಳನ್ನು ಹೊರುವ, ಹೆರುವ ಮಾನಸಿಕ ಸಂಕಷ್ಟ ಅನುಭವಿಸುವುದು. ರಾಜ್ಯದಲ್ಲಿ ಈಗಲೂ ಶಿಶುಮರಣ ಮತ್ತು ಪ್ರಸವದ ವೇಳೆ ತಾಯಿಯ ಮರಣ ಪ್ರಮಾಣ ಹೆಚ್ಚಿರಲು ಬಾಲ್ಯವಿವಾಹದ ಅನಿಷ್ಟ ಪದ್ಧತಿಯೂ ಬಹುಮುಖ್ಯ ಕಾರಣ. ಎಳೆಯ ವಯಸ್ಸಿನಲ್ಲಿ ಮದುವೆಯಾಗುವ ಹೆಣ್ಣುಮಕ್ಕಳ ಮೇಲೆ ನಡೆಯುವ ಪುರುಷರ ದೌರ್ಜನ್ಯವೂ ಹೆಚ್ಚು. ಇವತ್ತಿಗೂ ಉತ್ತರ ಕರ್ನಾಟಕದ ಹಲವು ಹಳ್ಳಿಗಳಲ್ಲಿ ಎಳೆಯ ವಯಸ್ಸಿನ ಹೆಣ್ಣುಮಕ್ಕಳ ಜತೆ ವಯಸ್ಸಾದ ಪುರುಷರ ಮದುವೆ ನಡೆಯುವುದು ಸಾಮಾನ್ಯ ಎನ್ನುವಂತಹ ಸ್ಥಿತಿ ಇದೆ.

ರಾಜ್ಯವನ್ನು ಇನ್ನು ಐದು ವರ್ಷಗಳಲ್ಲಿ ಬಾಲ್ಯವಿವಾಹಮುಕ್ತ ರಾಜ್ಯವಾಗಿಸಬೇಕು ಎಂದು ಮುಖ್ಯಮಂತ್ರಿಯವರು ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ. ಬಾಲ್ಯವಿವಾಹ ಇಲ್ಲವಾಗುವಂತೆ ಮಾಡಲು ಸರ್ಕಾರ ಪ್ರಚಾರಾಂದೋಲನವನ್ನೂ ಕೈಗೊಂಡಿದೆ. ಪ್ರಚಾರಾಂದೋಲನ ಮತ್ತು ಘೋಷಣೆಗಳು ಜನರ ಗಮನ ಸೆಳೆಯುತ್ತವೆ ಎನ್ನುವುದು ನಿಜ. ಆದರೆ ಬಾಲ್ಯವಿವಾಹದಂತಹ ಪಿಡುಗು ಕೇವಲ ಪ್ರಚಾರ ಮತ್ತು ಘೋಷಣೆಗಳಿಂದ ನಿವಾರಣೆಯಾಗುವುದಿಲ್ಲ. ನಮ್ಮ ಗ್ರಾಮೀಣ ಪ್ರದೇಶಗಳ ಸಾಮಾಜಿಕ– ಸಾಂಸ್ಕೃತಿಕ ಬದುಕಿನ ಸಂಕೀರ್ಣತೆಗಳು ಎಷ್ಟೋ ಸಲ ಬಾಲ್ಯವಿವಾಹಗಳಿಗೆ ತಳಪಾಯ ಹಾಕಿ ಕೊಡುತ್ತವೆ. ಎಷ್ಟೋ ಸಮುದಾಯಗಳಲ್ಲಿ ಮೂಢನಂಬಿಕೆಗಳು ಜನರನ್ನು ಬಾಲ್ಯವಿವಾಹಕ್ಕೆ ಪ್ರಚೋದಿಸುತ್ತವೆ. ಮದುವೆ ಎನ್ನುವ ವೈಯಕ್ತಿಕ ಆಚರಣೆ, ಇಡೀ ಸಮಾಜದ ಮೇಲಿನ ಬಹುದೊಡ್ಡ ಹೊರೆ ಎನ್ನುವಂತೆ ಬಿಂಬಿತವಾಗಿರುವುದೂ ಎಷ್ಟೋ ಪೋಷಕರನ್ನು ಹೆಣ್ಣುಮಕ್ಕಳಿಗೆ ಎಳವೆಯಲ್ಲೇ ಮದುವೆ ಮಾಡಿಸುವಂತೆ ಒತ್ತಾಯಿಸುತ್ತಿವೆ.

ಬಾಲ್ಯವಿವಾಹದ ಪಿಡುಗನ್ನು ನಿವಾರಿಸುವ ನಿಟ್ಟಿನಲ್ಲಿ ಸಮಗ್ರ ತಂತ್ರಗಳನ್ನು ರೂಪಿಸಬೇಕಿದೆ. ಸಂಪ್ರದಾಯ, ಬಡತನ, ಸಾಮಾಜಿಕ ಅಭದ್ರತೆ ಮುಂತಾಗಿ ಹಲವು ವಿಚಾರಗಳು ಒಟ್ಟುಗೂಡಿ ಹಳ್ಳಿಗಳಲ್ಲಿ ರೂಪಿತವಾಗಿರುವ ಸಂಕೀರ್ಣ ವಾತಾವರಣವನ್ನು ತಿಳಿಗೊಳಿಸುವುದು ಮೊದಲು ಆಗಬೇಕಾದ ಕೆಲಸ. ಹೆಣ್ಣುಮಗು ಕುಟುಂಬಕ್ಕೆ ಒಂದು ಹೊರೆ ಎಂಬ ರೂಢಿಗತ ಭಾವನೆಯನ್ನೇ ಮೊದಲು ಪೋಷಕರ ಮನಸ್ಸಿನಿಂದ ತೊಲಗಿಸಬೇಕಿದೆ. ಎಲ್ಲ ಹೆಣ್ಣುಮಕ್ಕಳಿಗೂ ಅತ್ಯುತ್ತಮ ಶಿಕ್ಷಣ ಉಚಿತವಾಗಿ ದೊರಕಿದರೆ ಈ ಸಮಸ್ಯೆಗಳನ್ನು ಸ್ವತಃ ಎದುರಿಸಲು ಅವರಿಗೇ ಶಕ್ತಿ ತುಂಬಿದಂತಾಗುತ್ತದೆ. ಜತೆಗೆ ಗ್ರಾಮೀಣ ಪ್ರದೇಶಗಳಲ್ಲಿ ಈ ನಿಟ್ಟಿನಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿರುವ ಸ್ವಯಂಸೇವಾ ಕಾರ್ಯಕರ್ತರಿಗೂ ಸರ್ಕಾರ ಗಟ್ಟಿ ಬೆಂಬಲ ಪ್ರಕಟಿಸಬೇಕು. ಬಾಲ್ಯವಿವಾಹ ನಿಷೇಧದ ಕಾನೂನು ಕಟ್ಟುನಿಟ್ಟಾಗಿ ಜಾರಿಗೊಳ್ಳುವಂತೆ ಸರ್ಕಾರಿ ಯಂತ್ರವನ್ನೂ ದೃಢಗೊಳಿಸಬೇಕು. ಈ ನಿಟ್ಟಿನಲ್ಲಿ ಧಾರ್ಮಿಕ ಮತ್ತು ಸಾಮುದಾಯಿಕ ಮುಖಂಡರಿಗೂ ತಿಳುವಳಿಕೆ ನೀಡಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.

■ ಬಿ.ಎಂ.ಹನೀಫ್


ಈಶ್ವರ